‘ ಎಲ್ಲರ ಹಡೆದವ್ವ ಆದ ಭೂಮ್ತಾಯಿಯ ತೊಡೆ ಮ್ಯಾಲೆ ಕುಂದ್ರದು, ನಿಂದ್ರದು, ನಡಿಯದು, ಓಡದು, ಆಡದು, ಮಕ್ಕಂಬದು ಮಾಡಿಕೆಂತ ಇರತನಕ ನಮಗ ಆಕಿ ಕಾಪಾಡ್ತಾಳ... ಭೂಮ್ತಾಯಿ ಸಂಪರ್ಕ ಕಡಿಮ್ಯಾಗ್ತಾ ಹೋದಂಗ ನಮ್ಮೊಳಗ ಅಹಂಕಾರ ತುಂಬಿಕೆಂತ ಹೋಗ್ತಾವ. ಈ ಅಹಂಕಾರನೇ ಅನಾರೋಗ್ಯಕ್ಕ ದಾರಿ...

"ಐಯೆಯ್ಯ... ಏನೋ ಅನ್ನನೇ ಉಣಲಿಲ್ಲಲ್ಲ? ಏನಾಯ್ತು?" ಅಂದಳು ಅಮ್ಮ.

"ಸಾಕಮ. ನಾ ಸ್ವಲ್ಪ ಹೊರಗ ಹೋಗದೈತಿ."

"ಕೈ ತೊಕ್ಕಂಡ್ರೇನಾಯ್ತು? ಇನ್ನೊಂದು ತಾಟು ತರ್ತೀನಿ. ಅನ್ನ ಉಣು. ಅರಹೊಟ್ಟೆಯಿಂದ ಯಾಕಿರ್ತಿ?"

"ರಾತ್ರಿ ಹೊಟ್ಟೆ ತುಂಬ ಹುಗ್ಗಿ ಉಂಬದು ಐತೆಲ್ಲಮ್ಮ ಮಗಳೆ. ಅದಿಕೇ ಹೊಟ್ಟೆ ಸ್ವಲ್ಪ ಖಾಲಿ ಇಟಕಂಡಾನ ನಿನ್ನ ಮಗ" ಅಂದ ಸೈಕಲ್ ತಾತ, ಸ್ವಲ್ಪೇ ಹೊತ್ತಿನ ಹಿಂದೆ ನಾನಾಡಿದ ನಂಜಿನ ಮಾತನ್ನು ಕುಂಡಿಗೆ ಒರೆಸಿಕೊಂಡವನಂತೆ.

ಆತನ ಇಂಥ ಮಾತುಗಳನ್ನು ಸಹಿಸಿಕೊಳ್ಳೋದು ನನಗೆ ಇನ್ನೂ ಕಷ್ಟ. ಏನಾದರೂ ನೆಪ ಮಾಡಿ ಹೊರಗೆ ಹೋಗಿಬಿಡಬೇಕು. ಆತನ ಸಹಜ ಸರಳತೆ ಒಂದು ವಿಧದಲ್ಲಿ ನನ್ನ ಸೋಲೇ ಅನ್ನಿಸಿ ಮತ್ತಷ್ಟು ಉದ್ವೇಗಕ್ಕೊಳಗಾಗಿ–

"ಕೇಳ್ತಾರಲ್ಲ ಅಂತ ಸುಮ್ಮನೆ ಏನನ್ನ ಹೇಳಬಾಡ ತಾತ ನೀನು. ಎಲ್ಯಾದ ಹುಗ್ಗಿ? ಬೆಳಕು ಹರಿತಂದರೆ ಊರಿಗೆ ಓಗವ್ನ ನಾನು. ರಾತ್ರಿ ಊಟಂತೂ ಮನ್ಯಾಗೇ ಮಾಡ್ತೀನಿ? ಹಂಗಾದ್ರ ರಾತ್ರಿ ಊಟಕ್ಕ ನಮಮ್ಮ ಹುಗ್ಗಿ ಮಾಡತಾಳೇನು?" ಮಾತಿನಲ್ಲಿ ನಾನು ಎಣಿಸಿದ್ದಕ್ಕಿಂತ ಬಿಗುವಿನ ಭಾವ ಇತ್ತೆಂದು ಮಾತಾಡಿ ಮುಗಿಸಿದ ಮೇಲೆ ಅನಿಸಿತು.

ಆತ ಅದೇ ಶಾಂತಸ್ವರದಲ್ಲಿ, "ನೋಡಪ್ಪಾ... ರಾತ್ರಿ ಊಟಕ್ಕ ನಿನ್ನ ಹಣೆಬರದಾಗ ಹುಗ್ಗಿ ಊಟ ಬರದಿದ್ದು ಕಾಣಿಸಿತು. ಹೇಳಿದೆ. ಅದು ನಿಮ್ಮಮ್ಮನೇ ಮಾಡಿ ಉಣಸ್ತಾಳೋ, ಯಾವಮ್ಮನೇ ಮಾಡಿ ಕಳಿಸ್ತಾಳೋ ನನಗನ್ನ ಏನು ಗೊತ್ತು?" ಅಂದ.

"ಯಾರನ್ನ ಮಾಡ್ಲಿ, ಯಾರನ್ನ ಕಳಿಸ್ಲಿ, ಉಣಬೇಕಾದೋನು ನಾನೇ ಉಣಲಿಲ್ಲಂದರ, ಆವಾಗ ನೀನು ಹೇಳ ಹಣೆಬರದ ಮಾತು ಸುಳ್ಳಾಗುತ್ತಲ್ಲ?" ಅಂದೆ.

"ನೋಡಪ್ಪ ತಪ್ಪುಸೋ ಮಾತು ನೀನು ಆಡ್ತೀದಿ, ಕಾಣಿಸಿರ ಮಾತು ನಾನು ಹೇಳೀನಿ. ಯಾರ್ನ ಸುಳ್ಳುಗಾರನ ಮಾಡಬೇಕಂತ ಆತನ ಇಚ್ಛೆ ಐತೋ ಯಾರಿಗೆ ಗೊತ್ತು? ನೋಡಮು ಮುಂಜಾನೆಂತೂ ಆಗುತ್ತಲ್ಲ" ಅಂದು, "ಅಳಿದೇವ್ರು ಆರಾಮಾಗಪ... ಎಮ್ಮ ಮಗಳೇ ನಾನು ಬರ್ತೀನಿ..." ಅಂದವನೇ ನನಗಿಂತ ಮೊದಲೇ ಹೊರಟುಬಿಟ್ಟ ನನ್ನ ಮರುಜವಾಬಿಗೆ ಅವಕಾಶವನ್ನೇ ಕೊಡದೆ.

ಇದು ನನ್ನ ಅಹಂಕಾರವನ್ನು ಮತ್ತಷ್ಟು ಕೆರಳಿಸಿತು.

ಈ ಭೂಮಿ ಮೇಲೆ ನಾನೊಬ್ಬನೇ ನಿಂತಿರುವಂತೆ, ನೆಲದೊಳಗೆ ಕುಸಿದುಹೋಗುತ್ತಿರುವಂತೆ ತೀವ್ರವಾದ ಪದಾಘಾತದ ಭಾವ. ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಲೇಬೇಕು. ಅಮ್ಮನಿಗೆ ಹೇಳಿದೆ–